# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್.ರಸ್ತೆ, ತುಮಕೂರು-572 103☏:0816-2255650, 2273511,ಫ್ಯಾಕ್ಸ್ :0816-2270719


ಸಂಖ್ಯೆ : ತು.ವಿ.: ಪ.ವಿ.:2024-25/ 295 ದಿನಾಂಕ: 11.07.2024

## :ಅಧಿಸೂಚನೆ:

ವಿಷಯ: 2024ರ ಮಾರ್ಚ್/ಏಪ್ರಿಲ್ ಮಾಹೆಗಳಲ್ಲಿ ನಡೆದ ಸ್ನಾತಕೋತ್ತರ ಪದವಿಯ ಪ್ರಥಮ ಮತ್ತು ತೃತೀಯ (ನವೀನ ಮತ್ತು ಪೂರಕ ಹಾಗೂ 2018-19ನೇ ಸಾಲಿನಲ್ಲಿ ಅವಧಿ ಪೂರೈಸಿರುವ ವಿದ್ಯಾರ್ಥಿಗಳ) ಸೆಮಿಸ್ಟರ್ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಛಾಲೆಂಜ್ ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವ ಕುರಿತು.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2024ರ ಮಾರ್ಚ್/ಏಪ್ರಿಲ್ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕೋತ್ತರ **ಪದವಿಯ ಪ್ರಥಮ ಮತ್ತು ತೃತೀಯ ಸೆಮಿಸ್ಟರ್ (ನವೀನ ಮತ್ತು ಪೂರಕ) ಹಾಗೂ 2018-19ನೇ ಸಾಲಿನಲ್ಲಿ ಅವಧಿ ಪೂರೈಸಿರುವ ವಿದ್ಯಾರ್ಥಿಗಳ** ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಈಗಾಗಲೇ ಫಲಿತಾಂಶ ಪ್ರಕಟಿಸಿದ **ಎಂ.ಕಾಂ ಹಾಗೂ ಎಲ್ ಎಲ್ ಎಂ** ವಿಷಯಗಳ ಉತ್ತರ ಪತ್ರಿಕೆಗಳ ಛಾಲೆಂಜ್ ಮೌಲ್ಯಮಾಪನಕ್ಕೆ ಅವಕಾಶ ಕಲ್ಪಿಸಲಾಗಿದ್ದು, ವಿದ್ಯಾರ್ಥಿಗಳು ಸಂಬಂಧಪಟ್ಟ ವಿಭಾಗಗಳಲ್ಲಿ/ಕಾಲೇಜುಗಳಲ್ಲಿ ವಿಭಾಗದ ಮುಖ್ಯಸ್ಥರು/ಪ್ರಾಂಶುಪಾಲರ ಮುಖಾಂತರ **ಯು.ಯು.ಸಿ.ಎಂ.ಎಸ್** ತಂತ್ರಾಂಶದ ಮುಖಾಂತರ ವಿದ್ಯಾರ್ಥಿಗಳ ಲಾಗಿನ್ ಮೂಲಕ ಅರ್ಜಿಯನ್ನು ಸಲ್ಲಿಸಿ ಸದರಿ ಪ್ರತಿಯನ್ನು ವಿಭಾಗ/ ಕಾಲೇಜುಗಳಿಗೆ ಸಲ್ಲಿಸುವುದು. ಸದರಿ ಮಾಹಿತಿಯನ್ನು ಈ ಕೆಳಗೆ ನೀಡಿದ ದಿನಾಂಕದೊಳಗೆ ಕುಲಸಚಿವರು (ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರಿಗೆ ಸಲ್ಲಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

| | |
|---|---|
| **ಛಾಲೆಂಜ್ ಮೌಲ್ಯಮಾಪನದ ಶುಲ್ಕ ಪ್ರತಿ ವಿಷಯಕ್ಕೆ (Per Paper)** | **ರೂ.1,310-00** |
| ವಿದ್ಯಾರ್ಥಿಗಳು ಛಾಲೆಂಜ್ ಮೌಲ್ಯಮಾಪನಕ್ಕೆ ಕಾಲೇಜು/ವಿಭಾಗದಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | **12.07.2024** |
| ವಿಭಾಗ/ಕಾಲೇಜಿನವರು ಆನ್‌ಲೈನ್‌ನಲ್ಲಿ ನಮೂದಿಸಲು ಕೊನೆಯ ದಿನಾಂಕ | **20.07.2024** |
| ಛಾಲೆಂಜ್ ಮೌಲ್ಯಮಾಪನಕ್ಕೆ ಸಲ್ಲಿಸಿದ ಅರ್ಜಿಗಳ ವಿವರಗಳನ್ನು ವಿಭಾಗ/ಕಾಲೇಜಿನವರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಕಡೆಯ ದಿನಾಂಕ | **22.07.2024** |

**ವಿಶೇಷ ಸೂಚನೆ:-**

- **2021-22ನೇ ಶೈಕ್ಷಣಿಕ ಸಾಲಿನಿಂದ 2023-24ನೇ ಸಾಲಿನ ಎಲ್ಲಾ ವಿದ್ಯಾರ್ಥಿಗಳು ಯು.ಯು.ಸಿ.ಎಂ.ಎಸ್** ತಂತ್ರಾಂಶದ ಮುಖಾಂತರ ವಿದ್ಯಾರ್ಥಿಗಳ ಲಾಗಿನ್ ಮೂಲಕ ಅರ್ಜಿಯನ್ನು ಸಲ್ಲಿಸಿ ಸದರಿ ಪ್ರತಿಯನ್ನು ವಿಭಾಗ/ಕಾಲೇಜುಗಳಿಗೆ ಸಲ್ಲಿಸುವುದು.
- **2018-2019 ಹಾಗೂ 2020-21ನೇ ಶೈಕ್ಷಣಿಕ ಸಾಲಿನ ಪೂರಕ ವಿದ್ಯಾರ್ಥಿಗಳು ತುಮಕೂರು ವಿಶ್ವವಿದ್ಯಾನಿಲಯ (tumkuruniversity.ac.in) ವೆಬ್‌ಸೈಟ್‌ನಲ್ಲಿ ಎಸ್.ಬಿ.ಐ. ಕಲೆಕ್ಟ್ ಮುಖಾಂತರ ಶುಲ್ಕ ಪಾವತಿಸಿ ಸಂಬಂಧಪಟ್ಟ ವಿಭಾಗ/ಕಾಲೇಜುಗಳಿಗೆ ಸಲ್ಲಿಸುವುದು. ವಿದ್ಯಾರ್ಥಿಗಳು ಸಲ್ಲಿಸಿರುವ ವಿವರಗಳನ್ನು ಕಾಲೇಜಿನವರು ಇ.ಎಂ.ಎಸ್ ತಂತ್ರಾಂಶದಲ್ಲಿ ನಮೂದಿಸತಕ್ಕದ್ದು.**
- **ಛಾಲೆಂಜ್ ಮೌಲ್ಯಮಾಪನದಲ್ಲಿ ಪಡೆದ ಅಂಕಗಳೇ ಅಂತಿಮವಾಗಿರುತ್ತದೆ. ಕಡೆಯ ದಿನಾಂಕದ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.**

11/7/24

**ಕುಲಸಚಿವರು(ಪರೀಕ್ಷಾಂಗ)**

ಕುಲಸಚಿವರು (ಮೌಲ್ಯಮಾಪನ) ತುಮಕೂರು ವಿಶ್ವವಿದ್ಯಾನಿಲಯ

ಗೆ,

**ನಿರ್ದೇಶಕರು/ ಮುಖ್ಯಸ್ಥರು/ಸಂಯೋಜಕರು/ಪ್ರಾಂಶುಪಾಲರು/ವಿವಿಧ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು ಮತ್ತು ವಿವಿಧ ಸ್ನಾತಕೋತ್ತರ ಸಂಯೋಜಿತ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.**

**ಪ್ರತಿಗಳು:**

1. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಸಿಸ್ಟಂ ಅನಾಲಿಸಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಕಛೇರಿ ಪ್ರತಿ.